
# ಬೆಳಕಿನ ಸಂಚಲನ

ಸಂ 3, ಸಂ 1 ಮೇ 2015



## ಗುರೂಜಿ ಕೃಷ್ಣಾನಂದ (1939-2012)

### ಬೆಳಕು

ಇದು ಭೌತಿಕ ಮಟ್ಟದ ಬೆಳಕಲ್ಲ, ಅತ್ಯಂತ ಸೂಕ್ಷ್ಮ ಬೆಳಕು. ಈ ಬೆಳಕು ಎಲ್ಲ ಸೃಷ್ಟಿಯ ಮೂಲ. ಎಲ್ಲ ಸಕ್ರಿಯ ಶಕ್ತಿಗಳ ಮೂಲ. ಪ್ರೀತಿ, ಶಾಂತಿ, ಸತ್ಯ, ವಿವೇಕ ಮತ್ತು ಸಮಸ್ತ ಜೀವರಾಶಿಗಳ ಮೂಲ. ಈ ಬೆಳಕೇ ದೇವರು.

### ಚಾನಲಿಂಗ್

ಬೆಳಕನ್ನು ನಮ್ಮೊಳಗೆ ಪ್ರವೇಶಿಸುವಂತೆ ಉದ್ದೇಶಿಸಿ, ನಂತರ ಇಡೀ ಪ್ರಪಂಚಕ್ಕೆ ಹರಡುವಂತೆ ಮಾಡುವುದೇ ಚಾನಲಿಂಗ್. ನಮ್ಮ ಶರೀರ ಬೆಳಕಿನ ಅತ್ಯುನ್ನತ ತರಂಗಗಳನ್ನು ಸ್ಥೂಲಮಟ್ಟದ ತರಂಗಗಳಾಗಿ ಬದಲಾಯಿಸುತ್ತದೆ.

ಬೆಳಕಿನ ಕಂಪನಗಳು ಎಲ್ಲ ಜೀವಿಗಳನ್ನು ಮತ್ತು ಪ್ರಕೃತಿಯನ್ನು ತಲುಪುತ್ತವೆ. ಅವು ಹೀಲಿಂಗ್ ಚೈತನ್ಯಗಳನ್ನು, ಪ್ರೇಮ, ಶಾಂತಿ ಮತ್ತು ಸಕಾರಾತ್ಮಕತೆಗಳನ್ನು ಹೊಂದಿರುತ್ತವೆ. ಅವು ಪರಿವರ್ತನೆಗೆ ಸಹಾಯ ಮಾಡುತ್ತವೆ. ನಾವು ಉತ್ತಮ ಮಾನವ ಜೀವಿಗಳಾಗುತ್ತೇವೆ. ನಮ್ಮ ಪ್ರಪಂಚ, ಉತ್ತಮ ಪ್ರಪಂಚವಾಗುತ್ತದೆ.

### ತಂತ್ರ

ನಿಮ್ಮ ಮೇಲೆ ಬೆಳಕಿನ ಸಾಗರವಿದೆ ಎಂದು ಕಲ್ಪಿಸಿಕೊಳ್ಳಿ. ಬೆಳಕು ನಿಮ್ಮ ದೇಹದೊಳಕ್ಕೆ ಬಂದು ತುಂಬಿಕೊಂಡಂತೆ ಭಾವಿಸಿ. ನಂತರ ಬೆಳಕಿನಲ್ಲಿರುವ ಪ್ರೇಮ ಮತ್ತು ಶಾಂತಿಗಳನ್ನು ಒಂದು ನಿಮಿಷದವರೆಗೆ ಅನುಭವಿಸಿ. ಆ ಬೆಳಕು ಕ್ರಮೇಣ ನಿಮ್ಮ ಮನೆ, ಸುತ್ತಮುತ್ತಲ ಪ್ರದೇಶ, ದೇಶ ಮತ್ತು ಪ್ರಪಂಚಕ್ಕೆ ಹರಡಿದಂತೆ ಕಲ್ಪಿಸಿಕೊಳ್ಳಿ.

ಇದನ್ನು ಕನಿಷ್ಟ 7 ನಿಮಿಷ ಅಭ್ಯಾಸ ಮಾಡಿ.

### ಲೈಟ್ ಚಾನಲ್ ವಿಶ್ವ ಸಂಚಲನ

ಈ ಸಂಚಲನವನ್ನು ಋಷಿಮಾರ್ಗದ ಸಂಸ್ಥಾಪಕರಾದ ಗುರೂಜಿ ಕೃಷ್ಣಾನಂದರವರು 18-05-2008 ರಂದು ಪ್ರಾರಂಭಿಸಿದರು.

ಈ ಸಂಚಲನವೆಂದರೆ ಬೆಳಕನ್ನು ಪ್ರತಿದಿನ ಏಳು ನಿಮಿಷಗಳವರೆಗೆ ಬೆಳಿಗ್ಗೆ ಏಳುವಾಗ ಅಥವಾ ರಾತ್ರಿ ಮಲಗುವ ಮೊದಲು ನಮ್ಮ ನಮ್ಮ ಸ್ಥಳಗಳಿಂದಲೇ ಚಾನಲ್ ಮಾಡುವುದು.

ಈ ಸಂಚಲನದ ಗುರಿ ಮುಖ್ಯವಾಗಿ ಈ ಭೂಮಿಯ ಮೇಲೆ ಶಾಂತಿಯನ್ನು ತರುವುದು.

### ಸಂಚಲನದ ವೈಶಿಷ್ಟತೆ

- ಬೆಳಕಿನಿಂದ ಏಕತೆ.
- ಇದು ಧಾರ್ಮಿಕ ಚಟುವಟಿಕೆಯಲ್ಲ.
- ವಿಶ್ವಾತ್ಮಕವಾದದ್ದು.
- ಇಲ್ಲಿ ಯಾವುದೇ ಕಟ್ಟುಪಾಡುಗಳಿಲ್ಲ.
- ಇಲ್ಲಿ ಸದಸ್ಯತ್ವವಿಲ್ಲ.
- ಶಾಂತಿ ನೆಲೆಸಲು ಪ್ರತಿಯೊಬ್ಬರೂ ಕೊಡುಗೆಯನ್ನು ಕೊಡಬಹುದು.
- ಇದು ಪ್ರತಿ ವ್ಯಕ್ತಿಗೆ ಮತ್ತು ವಿಶ್ವಕ್ಕೆ ಸಹಾಯಕಾರಿ.
- ಹೊಸಯುಗಕ್ಕೆ ಪ್ರವೇಶಿಸಲು ಇದು ನಮ್ಮನ್ನು ಮತ್ತು ವಿಶ್ವವನ್ನು ಸಿದ್ಧಗೊಳಿಸುತ್ತದೆ.

## ಒಂದು ಸಂದೇಶ

**ಗುರೂಜಿ ಕೃಷ್ಣಾನಂದ**

**ಅನು: ಶ್ರೀದೇವಿ**

(ಅವರ ಭಾಷಣದ ಆಯ್ದ ಭಾಗಗಳು)

ನಾವು ಬೆಳಕನ್ನು ಅನುಭವಿಸಿದಾಗ ಅದು ನಾವು ಸಂಪೂರ್ಣ ಶಾಂತಿಯಿಂದ ಇರುವ ನಮ್ಮ ಮನೆಗೆ ಹಿಂದಿರುಗಿದಂತೆ. ಅಲ್ಲಿ ಆನಂದವಿರುತ್ತದೆ. ನಾವು ಬೆಳಕನ್ನು ಅನುಭವಿಸುತ್ತಿದ್ದಾಗ, ನಾವು ಅಲ್ಲಿದ್ದಾಗ, ನಮಗೆ ಹೆಚ್ಚಿಗೆ ಏನೂ ಬೇಕೆನಿಸುವುದಿಲ್ಲ. ನಾವು ಸಮಗ್ರ ಹಾಗೂ ಪೂರ್ಣವೆಂದು ನಮಗೆ ಅನ್ನಿಸುತ್ತದೆ. ಬೇರೆ ಯಾವುದರ ಅವಶ್ಯಕತೆಯೂ ಇರುವುದಿಲ್ಲ. ನಾವು ಪರಿಪೂರ್ಣರೆಂದು ಹೇಳಬಹುದು. ಆ ಸಮಯದಲ್ಲಿ ನಾವು ಪರಿಪೂರ್ಣತೆಯನ್ನು ಅನುಭವಿಸುತ್ತೇವೆ. ಸಹಜವಾಗಿಯೇ ಕಿಂಚಿತ್ತೂ ನಕಾರಾತ್ಮಕತೆ ಇರುವುದಿಲ್ಲ, ನಕಾರಾತ್ಮಕ ಆಲೋಚನೆ ಇರುವುದಿಲ್ಲ. ಯಾವ ಆಲೋಚನೆಯೂ ಕೂಡ ಇರುವುದಿಲ್ಲ. ಸುರಕ್ಷತೆಯ ಅನುಭವವಾಗುತ್ತದೆ. ಅಲ್ಲಿ ಬಹಳಷ್ಟು ನಿಶ್ಚಲತೆ ಇರುತ್ತದೆ. ಅದರ ಅರಿವು ನಮ್ಮಲ್ಲಿರಬೇಕು. ಈ ನಿಶ್ಚಲತೆಯು ಅಂತರಂಗದ ನಿಶ್ಚಲತೆಯಾಗಿದೆ.

ಒಂದು ಬಲವಾದ ಬಿರುಗಾಳಿಯ ಬಗ್ಗೆ ಯೋಚಿಸಿ. ಆ ಬಿರುಗಾಳಿಯ ಕೇಂದ್ರದಲ್ಲಿ ಬಹಳ ನಿಶ್ಚಲತೆ ಇರುತ್ತದೆ. ಕೋಲಾಹಲವೆಲ್ಲಾ ಅದರ ಪರಿಧಿಯಲ್ಲಿ ಇರುತ್ತದೆ. ಅಂತೆಯೇ ನಾವು ಬೆಳಕನ್ನು ಅನುಭವಿಸಿದಾಗಲೆಲ್ಲಾ ನಾವು ಆಂತರ್ಯದಲ್ಲಿರುತ್ತೇವೆ. ಈ ಪ್ರಪಂಚದ, ಈ ಜೀವನದ ಬೇರೆ ಎಲ್ಲಾ ವಿಷಯಗಳು ಪರಿಧಿಯಲ್ಲಿರುತ್ತವೆ, ದೂರದಲ್ಲಿರುತ್ತವೆ. ಇದೊಂದು ಅತ್ಯುತ್ತಮವಾದ ಅನುಭವ. ನಿಮಗೆ ಸಮಯ ಸಿಕ್ಕಾಗಲೆಲ್ಲಾ ಇದನ್ನು ಹೆಚ್ಚು ಅಭ್ಯಾಸ ಮಾಡಬೇಕೆಂದು ನಾನು ಬಯಸುತ್ತೇನೆ. ಪ್ರಯಾಣ ಮಾಡುವಾಗ ಅಥವಾ ಇನ್ನಾವುದೇ ಸೂಕ್ತ ಸಮಯದಲ್ಲಿ ನೀವು ಇದನ್ನು ಅಭ್ಯಾಸ ಮಾಡಬಹುದು.

## ಘಟನಾವಳಿಗಳು

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಮೇ 18, 2015ರಂದು ನಾವು 7 ವರ್ಷಗಳ 'ಬೆಳಕಿನ ಚಾನಲ್‌ಗಳ ವಿಶ್ವ ಸಂಚಲನ'ವನ್ನು ಪೂರೈಸುತ್ತೇವೆ. ಈ 7 ವರ್ಷಗಳಲ್ಲಿ ಈ ಸಂಚಲನ, ಸಾಮಾನ್ಯ ವ್ಯಕ್ತಿಗಳ ಮೂಲಕ ಪ್ರಪಂಚದ ಬೇರೆ ಬೇರೆ ಮೂಲೆಗಳನ್ನು ಸದ್ದಿಲ್ಲದೆ ತಲುಪಿದೆ. ಮಿಲಿಯನ್‌ಗಟ್ಟಲೆ ಜನರು ಬೆಳಕನ್ನು ಚಾನಲ್ ಮಾಡಿದ್ದಾರೆ ಹಾಗೂ ಲಕ್ಷಗಟ್ಟಲೆ ಮಕ್ಕಳು, ವಿಶೇಷವಾಗಿ ಶಾಲಾ ಮಕ್ಕಳು, ನಿಯತವಾಗಿ ಚಾನಲ್ ಮಾಡುತ್ತಾರೆ. ಹೆಚ್ಚು ಬೆಳಕನ್ನು ಈ ಭೂಮಿಯ ಮಟ್ಟಕ್ಕೆ ತರಲಾಗಿದೆ. ವೈಯಕ್ತಿಕ ಮಟ್ಟದಲ್ಲಿ, ಬೆಳಕಿನ ಸುಸ್ಪಷ್ಟ ಪ್ರಭಾವವನ್ನು ಜನರು ತಮ್ಮ ಜೀವನದಲ್ಲಿ ಅನುಭವಿಸಿದ್ದಾರೆ. ಅಂತೆಯೇ, ಜಾಗತಿಕ ಮಟ್ಟದಲ್ಲಿ ಇದರ ಪ್ರಭಾವವನ್ನು ಖಚಿತವಾಗಿ ಗುರುತಿಸಲು ಈಗ ಕಷ್ಟವಾದರೂ ಕೂಡ, ಈ ಪರಿಶುದ್ಧ ಆತ್ಮಗಳಿಂದ ಚಾನಲ್ ಮಾಡಲ್ಪಟ್ಟ ಬೆಳಕು ಜಾಗತಿಕ ಮಟ್ಟದಲ್ಲಿನ ಸಕಾರಾತ್ಮಕ ಚಟುವಟಿಕೆಗಳನ್ನು ಬಲಗೊಳಿಸುತ್ತಿರುತ್ತದೆ. ಚಿಂತಿಸಬೇಕಾಗಿಲ್ಲ. ವ್ಯಕ್ತಿಗಳು ಬದಲಾದಾಗ, ವ್ಯಕ್ತಿಗಳು ಪರಿವರ್ತನೆಗೊಂಡಾಗ ಈ ಪ್ರಪಂಚ ಬದಲಾಗುತ್ತದೆ, ಈ ಪ್ರಪಂಚ ಪರಿವರ್ತನೆಗೊಳ್ಳುತ್ತದೆ.

ಈ ಸಂಚಲನವನ್ನು ಪ್ರಾರಂಭಿಸಿದ ಗುರೂಜಿ ಕೃಷ್ಣಾನಂದರವರು ಬೆಳಕನ್ನು ನಮ್ಮ ಜೀವನದಲ್ಲಿ ತರಲು ಬಹಳ ಪ್ರೀತಿಯಿಂದ ಕೆಲಸ ಮಾಡಿದ್ದಾರೆ. ಪ್ರತಿಯೊಬ್ಬ ವ್ಯಕ್ತಿಯೂ ಬೆಳಕಿನಿಂದ ಪ್ರಕಾಶಿಸಿದಾಗ ಅವರ ಕನಸು ನನಸಾಗುತ್ತದೆ ಹಾಗೂ ನಾವು ಶೀಘ್ರವಾಗಿ ಹೊಸಯುಗವನ್ನು ಪ್ರವೇಶಿಸುತ್ತೇವೆ.

## ಬೆಳಕಿನ ಕ್ರಿಯಾಶಕ್ತಿ

**ಮನೋಜ್ ಚೋಪ್ರ; ಅನು: ಶ್ರೀದೇವಿ**

ಅನೇಕ ಆಧ್ಯಾತ್ಮಿಕ ಮಾಸ್ಟರ್‌ಗಳು ಸದ್ದಿಲ್ಲದೆ ಹಾಗೂ ನಿಸ್ವಾರ್ಥತೆಯಿಂದ, ಅತಿಯಾದ ಗಮನ ಸೆಳೆಯುವಂತಹ ಪ್ರಚಾರಕ್ಕೆ ಬಾರದೆ ಮನುಕುಲಕ್ಕಾಗಿ ಕೆಲಸ ಮಾಡುತ್ತಾರೆ. ಹಿನ್ನೆಲೆಯಲ್ಲಿಯೇ ಉಳಿಯುವುದಕ್ಕೆ ಒಂದು ಉನ್ನತ ಉದ್ದೇಶವಿದೆ. ಪರಿಶುದ್ಧ ಹಾಗೂ ಮಹಾನ್ ಆತ್ಮಗಳಾದ ಅವರುಗಳು ನಮ್ಮ ಜೊತೆಯಲ್ಲಿ ಜನ್ಮತಾಳುತ್ತಾರೆ. ಮನುಕುಲಕ್ಕೆ ಮಾಡಿದ ಅವರ ತ್ಯಾಗ ಮತ್ತು ಪ್ರೀತಿಯನ್ನು ನಾವು ಎಂದಿಗೂ ಪೂರ್ಣವಾಗಿ ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ. ಕಾಲದಿಂದ ಕಾಲಕ್ಕೆ, ಯುದ್ಧಗಳಿಂದ ಹಾಗೂ ಪ್ರಕೃತಿ ವಿಕೋಪಗಳಿಂದ ಅವರು ಮನುಕುಲವನ್ನು ಉಳಿಸಿದ್ದಾರೆ.

ಸಮಾಜದ ಒಳಿತಿಗಾಗಿ ಬದುಕಿದ ಮತ್ತು ಮಡಿದ ನಮ್ಮ ಗುರೂಜಿ ಕೃಷ್ಣಾನಂದರವರು ಅಂತಹ ಒಂದು ಮಹಾನ್ ಆತ್ಮ. ಅವರು ಈಗಲೂ ಉನ್ನತ ಸ್ಥರಗಳಿಂದ ನಮಗೆ ಮಾರ್ಗದರ್ಶನ ಮಾಡುವುದನ್ನು ಮುಂದುವರೆಸಿದ್ದಾರೆ. ಅವರ ಶಿಷ್ಯರಾಗಲು ಮತ್ತು ಅವರ ಮಾರ್ಗದರ್ಶನದಲ್ಲಿ ಅವರ ಕನಸಿನ ಯೋಜನೆಯಲ್ಲಿ ಕೆಲಸ ಮಾಡಲು ಅವಕಾಶ ಪಡೆದ ನಾವು ಅದೃಷ್ಟಶಾಲಿಗಳು.

ಅವರ 76ನೇ ಜನ್ಮದಿನದಂದು, ಪ್ರೀತಿ ಮತ್ತು ಬೆಳಕಿನ ಅವರ ಸಂದೇಶವನ್ನು ಹರಡಲು ಪಣತೊಡೋಣ.

**ಮಾನಸ ಫೌಂಡೇಶನ್ (ರಿ)**
ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು–560077 ಭಾರತ.
ಫೋನ್ : (080) 2846 5280, 99000 75280 (10 AM to 5 PM)
ಇ–ಮೇಲ್ : info@lightchannels.com ವೆಬ್‌ಸೈಟ್ : www.lightchannels.com

## ಲೈಟ್ ಚಾನಲಿಂಗ್ ಕೇಂದ್ರಗಳು

ನಮ್ಮ ಲೈಟ್ ಚಾನಲಿಂಗ್ ಕೇಂದ್ರಗಳಲ್ಲಿ ಸ್ಥಳೀಯರು ಲೈಟ್ ಚಾನಲ್ ಮಾಡಲು ನಿಗದಿಪಡಿಸಿದ ಸಮಯದಲ್ಲಿ ಒಟ್ಟಿಗೆ ಸೇರುತ್ತಾರೆ. ಇದರಲ್ಲಿ ಭಾಗವಹಿಸಲು ಎಲ್ಲರಿಗೂ ಸ್ವಾಗತ. ಯಾವುದೇ ಶುಲ್ಕವಿಲ್ಲ ಹಾಗೂ ಸದಸ್ಯರಾಗಬೇಕಿಲ್ಲ.

**ಬೆಂಗಳೂರು**

ಸೋಮವಾರದಿಂದ ಶುಕ್ರವಾರದವರೆಗೆ
(ಸಂಜೆ 7:00 - 7:15)
ಶ್ರೀ ಸಿದ್ಧಾಶ್ರಮ, 17ನೇ ಅಡ್ಡರಸ್ತೆ,
ಮಲ್ಲೇಶ್ವರಂ
☎ 9084121545 ಶ್ರೀ ಚಂದ್ರಶೇಖರ್

ಸೋಮವಾರ (ಸಂಜೆ 6:30 - 7:00)
ಆಂಜನೇಯ ದೇವಸ್ಥಾನ,
ಮಹಾಲಕ್ಷ್ಮಿ ಬಡಾವಣೆ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಬುಧವಾರ (ಸಂಜೆ 6:30 - 7:00)
ಮಾರುತಿ ಮಂದಿರ, ವಿಜಯನಗರ
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಗುರುವಾರ (ಸಂಜೆ 6:30 - 7:00)
ಮಂಚ್‌ಕಿನ್ಸ್, ನಂ.
890, 38ನೇ ಅಡ್ಡರಸ್ತೆ,
20ನೇ ಮುಖ್ಯರಸ್ತೆ,
4ನೇ 'T' ಬ್ಲಾಕ್, ಜಯನಗರ
☎ 9902025444 ಕಾರ್ತಿಕ್ ಎನ್.

ಶುಕ್ರವಾರ (ಸಂಜೆ 6:30 - 7:00)
'ಸುಮತಿ', ನಂ. 481, 7ನೇ ಅಡ್ಡರಸ್ತೆ,
7ನೇ ಮುಖ್ಯರಸ್ತೆ,
ಜೆ.ಪಿ. ನಗರ 3ನೇ ಹಂತ
☎ 9900110351 ಶ್ರೀ ರಮೇಶ್ ವಿ. ಭೋಸೆಕರ್

ಶನಿವಾರ (ಸಂಜೆ 6:30 - 7:00)
ಬಲಮುರಿ ಮಹಾಗಣಪತಿ,
8ನೇ ಅಡ್ಡರಸ್ತೆ,
ಹೊಯ್ಸಳ ವೃತ್ತದ ಬಳಿ,
ಕೆಂಗೇರಿ ಸೆಟಲೈಟ್ ಟೌನ್
☎ 9972111809 ಶ್ರೀಮತಿ ಅಂಜಲಿ ಪಾಟಿಲ್ ಕೆ.

ಶನಿವಾರ (ಸಂಜೆ 6:00 - 7:00)
ಶಿಕ್ಷಾ ಸಾಗರ್ ಪ್ರೈಮರಿ ಶಾಲೆ, ನಂ. 77,
5ನೇ ಮುಖ್ಯ ರಸ್ತೆ, ಪೋಸ್ಟಲ್ ಕಾಲೋನಿ,
ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್



ಬೆಂಗಳೂರಿನ ಸಮರ್ಥನಮ್ ಟ್ರಸ್ಟ್‌ನ ಮಕ್ಕಳು ಬೆಳಕನ್ನು ಚಾನಲ್ ಮಾಡುತ್ತಿರುವುದು

## ಬೆಳಕಿನ ಮಾಸ್ಟರ್‌ಗಳ ವಿವೇಕವಾಣಿ

- ಬೆಳಕು ಈ ಪ್ರಪಂಚವನ್ನು ಪರಿವರ್ತನೆಗೊಳಿಸುತ್ತದೆ. ಶಾಂತಿ ಮತ್ತು ಸಮೃದ್ಧಿಯನ್ನು ತರುತ್ತದೆ. ಹೊಸಯುಗವನ್ನು ತರುತ್ತದೆ.
- ನಾವು ಬೆಳಕನ್ನು ಆಯ್ಕೆಮಾಡಿಕೊಳ್ಳಬೇಕು ಹಾಗೂ ಅಂಧಕಾರವನ್ನು ತಿರಸ್ಕರಿಸಬೇಕು. ನಾವು ಬೆಳಕನ್ನು ಆಯ್ಕೆ ಮಾಡಿಕೊಳ್ಳಬಹುದು ಹಾಗೂ ಹರಡಬಹುದು. ಬೆಳಕೇ ಶಾಂತಿ. ಬೆಳಕೇ ಪ್ರೀತಿ.
- ಬೆಳಕನ್ನು ನಮ್ಮ ಸುತ್ತಲೂ ಹಾಗೂ ಪ್ರಪಂಚದಾದ್ಯಂತ ಹರಡಿದಾಗ, ಎಲ್ಲಾ ಹಿಂಸೆಗಳು ಕಣ್ಮರೆಯಾಗುತ್ತವೆ, ಅಪ್ರೀತಿಯ ಎಲ್ಲಾ ಕೃತ್ಯಗಳು ಮಾಯವಾಗುತ್ತವೆ ಹಾಗೂ ಬೆಳಕು ಮತ್ತು ಶಾಂತಿಯಿಂದ ಕೂಡಿದ ಹೊಸಯುಗವನ್ನು ನಾವು ಪ್ರವೇಶಿಸುತ್ತೇವೆ.
- ಬೆಳಕು ಕೆಲಸ ಮಾಡುತ್ತದೆ. ಇದರಲ್ಲಿ ಬುದ್ಧಿಶಕ್ತಿ ಮತ್ತು ಸಾಮರ್ಥ್ಯವಿದೆ. ಹಾಗೂ, ರಾಜಕೀಯವಾಗಿ, ಆರ್ಥಿಕವಾಗಿ, ಪರಿಸರೀಯವಾಗಿ ಮತ್ತು ಆಧ್ಯಾತ್ಮಿಕವಾಗಿ ನಾವು ಈ ಭೂಮಿಯ ಮೇಲಿನ ಜೀವನವನ್ನು ಇಂದಿನ ಸ್ಥಿತಿಗಳಿಗೆ ತಂದು ಅವ್ಯವಸ್ಥೆಯನ್ನುಂಟುಮಾಡಿದಾಗಲೆಲ್ಲಾ, ಬೆಳಕು ಕೆಲಸ ಮಾಡಿದೆ.
- ಬೆಳಕಿಗೆ ಎಲ್ಲಾ ತಿಳಿದಿದೆ. ಬದಲಾವಣೆಯನ್ನು, ಪರಿವರ್ತನೆಯನ್ನು ನಾವು ಬಯಸುವುದಕ್ಕಾಗಿ ಅದು ಕಾಯುತ್ತಿದೆ. ಪರಿವರ್ತನೆಯನ್ನು ನಾವು ಬಯಸಬೇಕು. ಅದನ್ನು ನಮ್ಮ ಮೇಲೆ ಹೇರಲಾಗುವುದಿಲ್ಲ.
- ಶಾಂತಿಯನ್ನು ತರಲು, ಹೊಸಯುಗಕ್ಕಾಗಿ ಹೊಸ ಚೈತನ್ಯಗಳನ್ನು ತರಲು, ಪುನರುತ್ಥಾನಕ್ಕಾಗಿ, ಪರಿವರ್ತನೆಗಾಗಿ ಹಾಗೂ ಮಾನವ ನಿರ್ಮಿತ ಮಹಾದುರಂತಗಳಿಂದ ಈ ಭೂಗ್ರಹವನ್ನು ಉಳಿಸಲು ನಾವು ಬೆಳಕನ್ನು ಚಾನಲ್ ಮಾಡುತ್ತೇವೆ.
- ಬೆಳಕೇ ನಮ್ಮ ಭರವಸೆ. ನಮ್ಮ ಬಲ. ನಮ್ಮ ಭವಿಷ್ಯ.

– ಗುರೂಜಿ ಕೃಷ್ಣಾನಂದ

## ಶಾಲೆಗಳಲ್ಲಿ ಲೈಟ್ ಚಾನಲಿಂಗ್

| | |
|---|---|
| ಭಾಗವಹಿಸಿದ ಶಾಲೆಗಳ ಸಂಖ್ಯೆ | 4920 |
| ಲೈಟ್ ಚಾನಲ್ ಮಾಡಿರುವ ವಿದ್ಯಾರ್ಥಿಗಳ ಸಂಖ್ಯೆ | 27.07 ಲಕ್ಷ |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ಶಾಲೆಗಳ ಸಂಖ್ಯೆ | 1240 |
| ಪ್ರತಿದಿನ ಚಾನಲಿಂಗ್ ಮಾಡುತ್ತಿರುವ ವಿದ್ಯಾರ್ಥಿಗಳ ಸಂಖ್ಯೆ | 5.34 ಲಕ್ಷ |

## ಶಾಲೆಗಳಿಗೊಂದು ಮನವಿ

ನಿಮ್ಮ ಶಾಲೆಯಲ್ಲಿ ಲೈಟ್ ಚಾನಲಿಂಗ್ ಅನ್ನು ಪ್ರತಿನಿತ್ಯದ ಪ್ರಾರ್ಥನಾ ಸಮಯದಲ್ಲಿ ಮಾಡಿಸುವುದರ ಮೂಲಕ ಲೈಟ್ ಚಾನಲ್ಸ್ ವಿಶ್ವ ಸಂಚಲನವನ್ನು ಬಲಗೊಳಿಸಲು ಸಹಾಯ ಮಾಡಿ

## ಅಧ್ಯಾತ್ಮದ ಆಶ್ರಯ

**ಜಯಂತ್ ದೇಶ್‌ಪಾಂಡೆ; ಅನು: ಶ್ರೀದೇವಿ**

ಈಗಿನ ಕಾಲ ಬಹಳ ಗೊಂದಲದ ಕಾಲವೆಂದು ನಮ್ಮ ಸುತ್ತಲಿನ ಜೀವನವನ್ನು ನೋಡಿ ನಾವು ಅರ್ಥಮಾಡಿಕೊಳ್ಳಬಹುದು. ಈ ಅವಧಿ ತೀವ್ರವಾದ ಪ್ರಳಯದ ಕಾಲವೆಂದು ಗುರೂಜಿ ಕೃಷ್ಣಾನಂದರವರು ನಮಗೆ ಹೇಳಿದ್ದರು. ಪ್ರಳಯದ ಚೈತನ್ಯಗಳು ಎಲ್ಲವನ್ನೂ ಬೆಳಕಿಗೆ ತರುತ್ತವೆ. ಸತ್ಯ ಹೊರಬರುತ್ತದೆ. ಒಳ್ಳೆಯದು ಮತ್ತು ಕೆಟ್ಟದ್ದೂ ಹೊರಬರುತ್ತವೆ. ಜನರು ಸತ್ಯವನ್ನು ಸ್ಪಷ್ಟವಾಗಿ ಕಾಣಬಹುದು.

ಈ ಚೈತನ್ಯಗಳು ಜನರಿಗೆ ಮಾರ್ಗದರ್ಶನವನ್ನೂ ನೀಡುತ್ತವೆ ಮತ್ತು ಸಕಾರಾತ್ಮಕರಾಗಲು, ಬದಲಾಗಲು ಅವರನ್ನು ಪ್ರೋತ್ಸಾಹಿಸುತ್ತವೆ. ಈ ಚೈತನ್ಯಗಳು ತಾವಾಗಿಯೇ ಗೊಂದಲವನ್ನುಂಟು ಮಾಡುವುದಿಲ್ಲ. ಜನರು ಈ ಚೈತನ್ಯಗಳನ್ನು ಹಾಗೂ ಬದಲಾವಣೆಯನ್ನು ವಿರೋಧಿಸುವುದರಿಂದ ಗೊಂದಲಗಳು ಉಂಟಾಗುತ್ತವೆ. ಹಳೆಯ ನಕಾರಾತ್ಮಕ ಜೀವನ ರೀತಿಗಳನ್ನು ಬಿಡಲು ಜನರು ಕಷ್ಟಪಡುತ್ತಾರೆ ಹಾಗೂ ಅದೇ ಸರಿಯಾದ ಜೀವನ ರೀತಿ ಎಂದು ಅವರು ಹೇಗೋ ಒಪ್ಪಿಕೊಂಡಿದ್ದಾರೆ.

ನಾವು ಈ ಪ್ರಪಂಚದ ಒಂದು ಭಾಗ; ನಮ್ಮ ಸುತ್ತಲೂ ನಡೆಯುತ್ತಿರುವುದು ನಮ್ಮನ್ನು ಮುಟ್ಟದಂತೆ ತಡೆಯುವುದು ಸಾಧ್ಯವಿಲ್ಲ. ಈ ಪ್ರಪಂಚದಲ್ಲಿ ಏನೇ ನಡೆದರೂ ಅದು ನಮ್ಮನ್ನು ಯಾವುದೋ ಮಟ್ಟದಲ್ಲಿ ಮುಟ್ಟುತ್ತದೆ.

ಹಾಗಾದರೆ ಇಂತಹ ಕಷ್ಟಕರವಾದ ಕಾಲವನ್ನು ನಾವು ನಿಭಾಯಿಸುವುದು ಹೇಗೆ?

"ಅಧ್ಯಾತ್ಮದ ಆಶ್ರಯದಲ್ಲಿ ರಕ್ಷಣೆಯನ್ನು ಪಡೆಯಿರಿ" ಎಂಬ ಮಹರ್ಷಿ ಅಮರರವರ ಮಾತುಗಳು ನನಗೆ ನೆನಪಾಗುತ್ತದೆ. ಆಧ್ಯಾತ್ಮಿಕ ಮೌಲ್ಯಗಳನ್ನು ನಾವು ಪಾಲಿಸಿದ್ದೇ ಆದರೆ, ಅಧ್ಯಾತ್ಮದ ಆಶ್ರಯದಲ್ಲಿ ನಾವು ರಕ್ಷಣೆಯನ್ನು ಪಡೆಯುತ್ತೇವೆ. ಹೊರ ಹಾಗೂ ಒಳಗಿನ ಗೊಂದಲದ ಈ ಕಾಲದಲ್ಲಿ ನಾವು ಏನು ಮಾಡಬೇಕೆನ್ನುವುದನ್ನು ತಿಳಿಯುವುದು ಬಹಳ ಮುಖ್ಯ. ಒಳ್ಳೆಯತನ, ಪ್ರಾಮಾಣಿಕತೆ ಹಾಗೂ ಶಾಂತಿಯಿಂದ ಇರುವುದೇ ಆಧ್ಯಾತ್ಮಿಕತೆ ಎನ್ನುವುದನ್ನು ಅರ್ಥಮಾಡಿಕೊಂಡು ಪ್ರಜ್ಞಾಪೂರ್ವಕವಾಗಿ ನಮ್ಮ ಜೀವನದಲ್ಲಿ ಅವುಗಳನ್ನು ಪಾಲಿಸಿದರೆ, ಈ ಕಷ್ಟದ ಸಮಯವನ್ನು ನಾವು ಸುಲಭವಾಗಿ ದಾಟಬಹುದು.

ಜನರು ಆಧ್ಯಾತ್ಮಿಕ ರೀತಿಗಳನ್ನು ಒಪ್ಪಿಕೊಂಡು ಪಾಲಿಸಿದರೆ, ಈ ಗೊಂದಲಗಳು ಮಾಯವಾಗುತ್ತವೆ ಹಾಗೂ ನಾವು ಹೊಸಯುಗದಲ್ಲಿ ಇರುತ್ತೇವೆ. ಹೊಸಯುಗವು ವಿಧಿಲಿಖಿತ. ಅದಕ್ಕಾಗಿ ನಮ್ಮ ಪ್ರಪಂಚವು ಕಾಯುತ್ತಿದೆ. ಆದರೆ ಇದು ಸಾಧ್ಯವಾಗಲು, ಈ ಭೂಮಿಯ ಮೇಲಿನ ಬಹುಸಂಖ್ಯಾತ ಜನರು ಅಧ್ಯಾತ್ಮಿಕತೆಯನ್ನು ಆಯ್ಕೆ ಮಾಡಿಕೊಳ್ಳಬೇಕು.

ಪ್ರಪಂಚ ಇದನ್ನು ಆಯ್ಕೆ ಮಾಡಿಕೊಳ್ಳುವುದಕ್ಕಾಗಿ ನಾವು ಕಾಯಬೇಕಾಗಿಲ್ಲ. ನಮಗೋಸ್ಕರವಾದರೂ ನಾವು ಆಯ್ಕೆ ಮಾಡಿಕೊಳ್ಳಬಹುದು. ನಮಗೋಸ್ಕರ ನಾವು ಬೆಳಕನ್ನು ಆಯ್ಕೆ ಮಾಡಿಕೊಳ್ಳಬಹುದು. ನಾವು ಬೆಳಕನ್ನು ಆಯ್ಕೆಮಾಡಿಕೊಂಡಾಗ ಅಧ್ಯಾತ್ಮದ ಆಶ್ರಯದಲ್ಲಿ ರಕ್ಷಣೆ ಪಡೆಯುತ್ತೇವೆ. ನಾವು ಹೀಗೆ ಮಾಡಿದಾಗಲೂ ನಮ್ಮ ಸುತ್ತಲಿನ ಜೀವನದಲ್ಲಿನ ಗೊಂದಲಗಳು ನಮ್ಮನ್ನು ತಟ್ಟಬಹುದು, ಆದರೆ ಇದು ಬಾಹ್ಯ ಮಟ್ಟದಲ್ಲಿ ಮಾತ್ರ. ಮಾನವಕುಲವೆಲ್ಲಾ ಒಟ್ಟಾಗಿ ಹೊಸಯುಗಕ್ಕೆ ಪ್ರವೇಶಿಸುವ ತನಕ ನಾವು ಬಾಹ್ಯ ಮಟ್ಟದ ಕಷ್ಟಗಳನ್ನು ಹಾಗೂ ಸವಾಲುಗಳನ್ನು ದೂರ ಮಾಡಲು ಸಾಧ್ಯವಿಲ್ಲ, ಆದರೆ ಅಂತರಂಗದಲ್ಲಿ ನಾವು ಸಮಾಧಾನವನ್ನು ಅನುಭವಿಸಬಹುದು. ಅಂತರಂಗದಲ್ಲಿ ಶಾಂತಿಯನ್ನು ಅನುಭವಿಸಬಹುದು. ವಿಶ್ವದ ಸಹಾಯ ಮತ್ತು ಕೃಪೆಯನ್ನು ಅನುಭವಿಸಬಹುದು.

ಇತರರಿಗೆ ಹಾಗೂ ನಮಗೆ ನಾವೇ ಸಹಾಯ ಮಾಡಿಕೊಳ್ಳಲು ನಾವು ಬೆಳಕನ್ನು ಚಾನಲ್ ಮಾಡಬಹುದು. ನಾವು ಚಾನಲ್ ಮಾಡಿದ ಬೆಳಕು ತಕ್ಷಣವೇ ಜನರಲ್ಲಿ ಬದಲಾವಣೆಯನ್ನು ತರದೇ ಇರಬಹುದು, ಆದರೆ ಅದು ಒಂದು ತರಹದ ಜಾಗೃತಿಯನ್ನು ಅವರಲ್ಲಿ ತರುತ್ತದೆ. ಅವರು ಧ್ಯಾನದಂತಹ ಆಧ್ಯಾತ್ಮಿಕ ಅಭ್ಯಾಸಗಳ ಕಡೆಗೆ ತಿರುಗುತ್ತಾರೆ ಹಾಗೂ ಬದಲಾವಣೆಯ ಪ್ರಕ್ರಿಯೆ ಪ್ರಾರಂಭವಾಗುತ್ತದೆ.

ಈ ಪ್ರಕ್ರಿಯೆ ಪ್ರತಿಯೊಬ್ಬರಲ್ಲಿಯೂ ಪ್ರಾರಂಭವಾಗಲಿ ಹಾಗೂ ಈ ಭೂಮಿ, ಶಾಂತಿ, ಸೌಹಾರ್ದತೆ ಮತ್ತು ಹೊಸಯುಗದೆಡೆಗೆ ಶೀಘ್ರವಾಗಿ ಚಲಿಸಲಿ. ■

## ಲೈಟ್ ಚಾನಲಿಂಗ್ ಕೇಂದ್ರಗಳು

ಶನಿವಾರ (ಸಂಜೆ 7:30 - 8:30)
ಗುರುದ್ವಾರ ಸಾಹಿಬ್,
ಆಂಜನೇಯ ದೇವಸ್ಥಾನದ ಎದುರು,
ಅಶ್ವತ್ಥ ನಗರ ಮುಖ್ಯ ರಸ್ತೆ, ಸಂಜಯ ನಗರ
☎ 9686571066 ಶ್ರೀ ಸುದೀಪ್ ಜಯರಾಮ್

### ಸೋಲಾಪೂರ್

ಪ್ರತಿದಿನ (ಸಂಜೆ 7:00 - 7:30)
ಬಾಲಗಣೇಶ್ ಮಂದಿರ, ಬುಶರ್ ಪೇಠ್,
ಮೊಹೋಲ್
☎ 09860967066, ಶ್ರೀ ವಿವೇಕಾನಂದ ಸ್ವಾಮಿ
☎ 09970800279, ಶ್ರೀಮತಿ ಸ್ವರೂಪ ಸ್ವಾಮಿ

### ಚೆನ್ನೈ

ಭಾನುವಾರ (ಬೆಳಿಗ್ಗೆ 10:00 -10:30)
ನಂ. 481, ಸಾಯಿಪ್ರೇಮ್, 19 ನೇ ರಸ್ತೆ,
4ನೇ ಸೆಕ್ಟರ್, ಕೆ.ಕೆ. ನಗರ
☎ 9444880409, ಶ್ರೀಮತಿ ರಾಜಲಕ್ಷ್ಮಿ ಆರ್.

### ಪುಣೆ

ಶನಿವಾರ (ಸಂಜೆ 6:30 - 7:00)
3 B, ಕಪಿಲ ಹೌಸಿಂಗ್ ಸೊಸೈಟಿ,
ಗೋಖಲೆನಗರ, ಪುಣೆ - 411016
☎ 9011038169, ಶ್ರೀ ಆಶುತೋಶ್ ನವನ್‌ಗುಲ್



ಗುರುವಾರ (ಮಧ್ಯಾಹ್ನ 2:30 - 3:00)
ಸಿಂಧಿ ಮಂದಿರ, ಸತ್ನಮ್ ಟೆಕ್ಸ್‌ಟೈಲ್ ಪಕ್ಕ,
ಶಿವಸೇನ ಕಛೇರಿಯ ಸಮೀಪ, ಉರುಲಿ ಕಾಂಚನ್,
ಹವೇಲಿ ಜಿಲ್ಲೆ, ಪುಣೆ - 412202
☎ 9822973632, ಶ್ರೀ ಗೋರಕ್ಷ್ ಮಹಾದಿಕ್

### ವಿಶಾಖಪಟ್ಟಣ



ಶನಿವಾರ (ಸಂಜೆ 7:00 - 7:30)
ಮನೆ ನಂ. 14-339/19, ಫ್ಲಾಟ್ ನಂ. 207,
ಶ್ರೀ ಮಿತ್ರ ಹೈಟ್ಸ್, ಬಾಲಾಜಿ ಗಾರ್ಡನ್,
ಗೋಪಾಲಪಟ್ನಂ, APRTC ಬಸ್ ಡಿಪೋ ಎದುರು
☎ 9848628324, ಶ್ರೀ ವಿ. ಹರಿಕೃಷ್ಣನ್

### ಮೀರಜ್

ಗುರುವಾರ (ಸಂಜೆ 7:45)
ಶ್ರೀ ಶಿವರುದ್ರ ಬಿ. ಬೆಲಗನ್ವಿ
C/o. ಶ್ರೀ ಸ್ವಾಮಿ ಸಮರ್ಥ ಸೇವಾ ಕೇಂದ್ರ
A-gat Plot No-135, ಸುಭಾಶ್ ನಗರ ಪೋಸ್ಟ್
☎ 9822421463, ಶ್ರೀ ಮಹಾಜನ್



## ಅನುಭವಗಳು

**ಸಂ: ವೈಶಾಲಿ ಜೋಶಿ; ಅನು: ಪಾಂಡುರಂಗ**

ಪ್ರತಿ ದಿನ ನನ್ನ ತರಗತಿ ಪ್ರಾರಂಭವಾಗುವ ಮೊದಲು ನಾನು ನನ್ನ ಸಹಪಾಠಿಗಳ ಜೊತೆ ಲೈಟ್ ಚಾನಲಿಂಗ್ ಮಾಡುತ್ತೇನೆ. ನನ್ನ ದೇಹ ಮತ್ತು ಮನಸ್ಸಿನಲ್ಲಿ ಅನೇಕ ಬದಲಾವಣೆಗಳಾಗಿವೆ ಎಂದು ನನಗೆ ಅನಿಸುತ್ತಿದೆ. ದಿನಪೂರ್ತಿ ನಾನು ಉಲ್ಲಾಸದಿಂದ ಇರುತ್ತೇನೆ. ನನ್ನ ಮನಸ್ಸು ಬಹಳ ಪ್ರಶಾಂತ ವಾಗಿರುತ್ತದೆ. ನನಗೆ ಬೇರೆಯವರ ಬಗ್ಗೆ ಇದ್ದ ತಪ್ಪು ಅಭಿಪ್ರಾಯಗಳಿಂದ ಹೊರ ಬರಲು ಲೈಟ್ ಚಾನಲಿಂಗ್ ನನಗೆ ಸಹಾಯ ಮಾಡುತ್ತದೆ. ನನ್ನ ನಡತೆಯನ್ನು ಸರಿಪಡಿಸಿಕೊಳ್ಳಲು ಲೈಟ್ ಚಾನಲಿಂಗ್ ನನಗೆ ದಾರಿ ತೋರಿಸುತ್ತದೆ, ಮತ್ತು ನನ್ನ ಆಲೋಚನೆಗಳಿಗೆ ಮಾರ್ಗದರ್ಶನ ಮಾಡುತ್ತದೆ. ನನ್ನಲ್ಲಿ ಆತ್ಮ ವಿಶ್ವಾಸ ಮೂಡಿಸಿದೆ. ಹಿಂದೆ ನಾನು ಅಷ್ಟು ಚೆನ್ನಾಗಿ ಓದುತ್ತಿರಲಿಲ್ಲ. ಆದರೆ ಈಗ ನಾನು ಸುಧಾರಿಸಿದ್ದೇನೆ.

– ಕೃಷ್ಣ ಪ್ರಭಾ ಆರ್, ಹನ್ನೊಂದನೇ ತರಗತಿ, ಎವರೆಸ್ಟ್ ಮರಿಯಪ್ಪ ನಾಡರ್ ಹೈಯರ್ ಸೆಕೆಂಡರಿ ಸ್ಕೂಲ್, ಕೋವಿಲ್‌ಪಟ್ಟೀ

ನನ್ನ ಎಲ್ಲ ಕಷ್ಟದ ದಿನಗಳಿಂದ ಪಾರಾಗಲು ಲೈಟ್ ಚಾನಲಿಂಗ್ ನನಗೆ ಸಹಾಯ ಮಾಡಿದೆ. ಕಷ್ಟಕರವಾದ ಬಿಜಿನೆಸ್ ಸ್ಟಡೀಸ್ ವಿಷಯದ ಪರೀಕ್ಷೆಯನ್ನು ನಾನು ಬರೆಯಬೇಕಾಗಿತ್ತು. ಪರೀಕ್ಷೆ ಬರೆಯುವ ಮೊದಲು ನಾನು ಕನಿಷ್ಠ 7 ನಿಮಿಷಗಳ ಕಾಲ ಲೈಟ್ ಚಾನಲಿಂಗ್ ಅಭ್ಯಾಸ ಮಾಡಿದೆ. 92 ಅಂಕಗಳನ್ನು ಪಡೆದೆ! ಲೈಟ್ ಚಾನಲಿಂಗ್ ಮೂಲಕ ನನಗೆ ಸಿಗುವ ಚೈತನ್ಯ ಮತ್ತು ಆಶೀರ್ವಾದಗಳಿಗೆ ನನ್ನ ಕೃತಜ್ಞತೆಗಳು.

ವಿಶ್ವ ಲೈಟ್ ಚಾನಲ್‌ಗಳ ದಿನವಾದ 30–1–2015ರಂದು ಮಧ್ಯಾಹ್ನ 12 ಘಂಟೆ ಸಮಯದಲ್ಲಿ ನಾನು ಲೈಟ್ ಚಾನಲಿಂಗ್ ಅಭ್ಯಾಸ ಮಾಡಿದೆ. '2020 ಇಂಡಿಯಾ' ದ ಮಾದರಿ ಯನ್ನು ಸಿದ್ಧ ಪಡಿಸಬೇಕೆಂದೂ ಹಾಗೂ ಆ ರೀತಿಯಲ್ಲಿ ಪ್ರಪಂಚ ಬದಲಾವಣೆ ಹೊಂದುತ್ತದೆ ಮತ್ತು ಆ ದಿನ ಇಡೀ ಪ್ರಪಂಚವೇ ಲೈಟ್ ಚಾನಲಿಂಗ್ ಅಭ್ಯಾಸ ಮಾಡುತ್ತದೆ ಎಂದು ನನಗೆ ಯಾರೋ ಹೇಳಿದ ಅನುಭವವಾಯಿತು.

– ಸುಷ್ಮ ಶ್ರೀ ಎಮ್. ಎ, ಲೈಟ್ ಚಾನಲ್

ನಮ್ಮ ಮನೆಯಲ್ಲಿ ಲೈಟ್ ಚಾನಲಿಂಗ್ ಕೇಂದ್ರವನ್ನು ಪ್ರಾರಂಭಿಸಿ ಇಂದಿಗೆ ನಾಲ್ಕು ವರ್ಷಗಳಿಗೂ ಹೆಚ್ಚು ಕಾಲವಾಗಿದೆ. ಪ್ರತಿ ಶುಕ್ರವಾರ ತಪ್ಪದೆ ಚಾನಲಿಂಗ್ ಮಾಡುತ್ತಿದ್ದೇವೆ. ನನಗೂ ಮತ್ತು ನನ್ನ ಶ್ರೀಮತಿಯವರಿಗೂ ನಮ್ಮ ಮನೆಯಲ್ಲಿ ಶಾಂತಿಯ ಅನುಭವವಾಗಿದೆ. ನಾವು ಧ್ಯಾನ ಮತ್ತು ಚಾನಲಿಂಗ್ ಮಾಡುತ್ತಿರುವು ದರಿಂದ ನಮ್ಮ ದೇಹದ ಒಳಗೂ ಮತ್ತು ಹೊರಗೂ ಶಾಂತಿ ಮತ್ತು ಸಮಾಧಾನವನ್ನು ಕಾಯ್ದುಕೊಂಡಿದ್ದೇವೆ. ಜೀವನದ ವಾಸ್ತವತೆ ಗಳನ್ನು, ಅವು ಬಂದ ಹಾಗೇ ಸಂತೋಷದಿಂದ ಒಪ್ಪಿಕೊಂಡು ಎದುರಿಸಲು ಲೈಟ್ ಚಾನಲಿಂಗ್ ನಮಗೆ ಶಕ್ತಿಯನ್ನು ತಂದುಕೊಟ್ಟಿದೆ.

– ರಮೇಶ್ ವಿ. ಭೋಸೆಕರ್, ಕಾರ್ಯಕರ್ತ

2015ರ ಏಪ್ರಿಲ್ 4ರಂದು ಮುಂಜಾನೆ ಎಂದಿನಂತೆ ಲೈಟ್ ಚಾನಲಿಂಗ್ ಮಾಡಲು ನಾನು ಕುಳಿತುಕೊಂಡೆ. ನಾನು ಲೈಟ್ ಚಾನಲಿಂಗ್ ಮಾಡುತ್ತಿರುವಾಗ ನನ್ನ ಅಮ್ಮ ನಿದ್ರೆಯಲ್ಲಿ ಮಾತನಾಡುವುದಕ್ಕೆ ಶುರು ಮಾಡಿದರು. 'ಈ ಯುಗ ಮುಗಿದಿದೆ, ಮತ್ತು ಹೊಸ ಯುಗ ಪ್ರಾರಂಭವಾಗಿದೆ. ಪ್ರತಿಯೊಬ್ಬರಿಗೂ ಒಳ್ಳೆ ದಿನಗಳು ಬರಲಿವೆ ಮತ್ತು ಪ್ರತಿಯೊಬ್ಬರೂ ತಮ್ಮ ಜೀವನದಲ್ಲಿ ಪ್ರಗತಿಯನ್ನು ಹೊಂದುತ್ತಾರೆ' ಎಂದು ಅವರು ಹೇಳಿದರು. ಇದು ಅದ್ಭುತ ವೆನಿಸಿತು! ನನ್ನ ಅಮ್ಮನಿಗೆ 90 ವರ್ಷ ವಯಸ್ಸಾಗಿದೆ ಹಾಗೂ ಮುಂಬರುವ ಸತ್ಯಯುಗದ ಬಗ್ಗೆ ಅವರಿಗೆ ಏನೂ ಗೊತ್ತಿಲ್ಲ. ಇದು ಒಂದು ಆಕಾಶವಾಣಿಯಂತೆ ನನಗೆ ಅನ್ನಿಸಿತು.

– ವಿಲಾಸ್ ಖೆಡೇಕರ್, ಲೈಟ್ ಚಾನಲ್

ಲೈಟ್ ಚಾನಲ್ ಮಾಡುವುದರಿಂದ ನನಗೆ ಅನೇಕ ಪ್ರಯೋಜನಗಳು ಲಭ್ಯವಾಗಿವೆ. ನಾನು ಚೆನ್ನಾಗಿ ಓದಬಲ್ಲೆ; ನನ್ನ ಜ್ಞಾಪಕ ಶಕ್ತಿ ಹೆಚ್ಚಿದೆ. ನಾನು ಚುರುಕಾಗಿದ್ದೇನೆ ಮತ್ತು ಹೆಚ್ಚು ಚೈತನ್ಯ ಹಾಗೂ ಉಲ್ಲಾಸಭರಿತಳಾಗಿದ್ದೇನೆ ಎಂದು ಅನ್ನಿಸುತ್ತದೆ. ನನ್ನ ಕೋಪ ಕಡಿಮೆಯಾಗಿದೆ. ಆಂಗ್ಲ ಭಾಷೆಯಲ್ಲಿ ಉತ್ತಮಗೊಂಡಿದ್ದೇನೆ ಹಾಗೂ ಚೆನ್ನಾಗಿ ಬರೆಯಬಲ್ಲೆ.

– ಎಸ್. ವೇಲಮ್ಮಲ್, 5ನೇ ತರಗತಿ, ಸೆಂಟ್ ಜೋಸೆಫ್ ಕ್ಸೇವಿಯರ್ ಆರ್. ಸಿ. ಪ್ರೈಮರಿ ಸ್ಕೂಲ್, ಕುಲಸೇಕರನ್ ಪಟ್ಟಿನಮ್, ತಮಿಳುನಾಡು

ಬೆಳಕಿನ ಸಂಚಲನ ಕನ್ನಡ ಮಾಸಪತ್ರಿಕೆ, ಖಾಸಗಿ ಪ್ರಸಾರಕ್ಕಾಗಿ ಮಾತ್ರ ಸಂಪಾದಕರು, ಪ್ರಕಾಶಕರು ಮತ್ತು ಮುದ್ರಕರು: ಶ್ರೀದೇವಿ (ಮಾನಸ ಫೌಂಡೇಶನ್ (ರಿ) ಪರವಾಗಿ)
ಪ್ರಕಾಶನ ಸ್ಥಳ: ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು– 560077
ಮುದ್ರಣ ಸ್ಥಳ : ಗುಡ್ ಪ್ರಿಂಟ್ಸ್, ವೀಣ ಕಾಂಪ್ಲೆಕ್ಸ್, ಹಳೇ ಮದ್ರಾಸ್ ರಸ್ತೆ, ದೂರವಾಣಿನಗರ, ಬೆಂಗಳೂರು – 560 016
ಮಾಲೀಕರು : ಮಾನಸ ಫೌಂಡೇಶನ್ (ರಿ), ತಪೋನಗರ, ಚಿಕ್ಕಗುಬ್ಬಿ, (ಹೆಣ್ಣೂರು–ಬಾಗಲೂರು ರಸ್ತೆ) ಬೆಂಗಳೂರು – 560077 ಸಂಪಾದಕರು: ಶ್ರೀದೇವಿ